**ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ**

ಸಿಸಿ ನಂ.**425/2022**

1) ಕರ್ನಾಟಕ ಸರ್ಕಾರ ...ಪಿರ್ಯಾದಿ.

**- ವಿರುದ್ಧ -**

1) ರಮೇಶ ಶಿವಲಿಂಗಪ್ಪ ಗಲಗಲಿ, ವಃ 35,
2) ಮಾಳಪ್ಪ ಮಹಾದೇವಪ್ಪ ಓಲೆಕಾರ ಉರ್ಫ ಪೂಜಾರಿ, ವಃ 37,
ಇಬ್ಬರೂ ಸಾಃ ಕುಲಹಳ್ಳಿ, ತಾಃ ರಬಕವಿ-ಬನಹಟ್ಟಿ.

.....ಆರೋಪಿತರು

= = = = =

**ಉಪಸ್ಥಿತರುಃ ಶ್ರೀಮತಿ ಗೀತಾಮನಿ.**
B.A. L.L.B
ಹೆಚ್ಚುವರಿ, ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಮುಧೋಳ.

ಆರೋಪಿತರುಃ-
1) ರಮೇಶ ಶಿವಲಿಂಗಪ್ಪ ಗಲಗಲಿ,
2) ಮಾಳಪ್ಪ ಮಹಾದೇವಪ್ಪ ಓಲೆಕಾರ ಉರ್ಫ ಪೂಜಾರಿ,

**: : ದೋಷಾರೋಪಣೆ: :**

ದಿನಾಂಕಃ21.05.2022 ರಂದು 12.30 ಗಂಟೆಗೆ ಆರೋಪಿ ನಂ.1 ನೀನು ಫಿರ್ಯಾದಿಗೆ ನನಗೆ ಬುದ್ದಿ ಹೇಳ್ತಿ ಲೌಡಿ ಅಂತಾ ಹಲ್ಕಟ ಬೈದಾಡಿದ್ದು ಆ ಮೂಲಕ ಭಾ.ದಂ.ಸಂ.ಕಲಂ.354 ಸಹವಾಚಕ 34 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿ ನಂ.1 ನೀನು ಪಿರ್ಯಾದಿಯ ಕೂದಲು ಹಿಡಿದು ಜಗ್ಯಾಡಿದ್ದು ಆ ಮೂಲಕ ಭಾ.ದಂ.ಸಂ.ಕಲಂ.354(ಬಿ) ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿತರಾದ ನೀವು ಎರಿಟಿಗಾ ಕಾರ ನಂ.ಕೆಎ-29/ಎಮ್8743 ನಲ್ಲಿ ಫಿರ್ಯಾದಿ ಕೆಲಸ ಮಾಡುವ ಶಾಲೆಯ ಓಳಗೆ ಪಿರ್ಯಾದಿಯನ್ನು ಹಿಂಬಾಲಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ.354(ಡಿ) ಸಹವಾಚಕ ಕಲಂ 34 ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿತರಾದ ನೀವು ಎರಿಟಿಗಾ ಕಾರ ನಂ.ಕೆಎ-29/ಎಮ್8743 ನಲ್ಲಿ ಫಿರ್ಯಾದಿ ಕೆಲಸ ಮಾಡುವ ಶಾಲೆಯ ಓಳಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾ.ದಂ.ಸಂ. ಕಲಂ.448 ಸಹವಾಚಕ ಕಲಂ 34 ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿತರಾದ ನೀವುಗಳು ಪಿರ್ಯಾದಿಗೆ ಅವಮಾನ ಮಾಡಿದ್ದು 2 ನೇ ಆರೋಪಿಯಾದ ನೀನು ಈ ಪ್ರಕರಣ ಸಾಕ್ಷಿದಾರರಾದ ಚಾಸಾ-8 ಹಾಗೂ 9 ಇವರು ನಿಮ್ಮಗಳ ಜಗಳ ಬಿಡಿಸಲು ಬಂದಾಗ ನಿವೇನು ಕೇಳತೀರಿ ಬೋಸಡಿ ಮಕ್ಕಳ್ಯಾ , ನಾ ಪ್ರೆಸ್ ರಿಪೋರ್ಟರ್ ಅದೀನಿ ನಿಮ್ಮನ್ನು ಹಾಗೂ ನಿಮ್ಮ ಶಾಲೆಯನ್ನು ನೋಡಕೋತೀನಿ ಅಂತಾ ಅವಾಚ್ಯವಾಗಿ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ 34 ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ 1 ನೇ ಆರೋಪಿಯಾದ ರಮೇಶ ಗಲಗಲಿ ನೀನು, ನಿನಗೆ ಫಿರ್ಯಾದಿಯು ಮದುವೆ ಆಗದಿದ್ದರೆ ಆ್ಯಸಿಡ್ ಹಾಕಿ ಸಾಯಿಸುತ್ತೇನೆ ಎಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.506 ಸಹವಾಚಕ 34 ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇಃ 1) - ಈ ಆಪಾದನೆಯನ್ನು ಓದಿ ಹೇಳಿದ್ದು ತಿಳಿಯಿತೋ ಹೇಗೆ ?

ಉತ್ತರ-1)

ಪ್ರಶ್ನೇಃ 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ-2)

ದಿಃ19.04.2023

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮುಧೋಳ.